# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1055 |
| ಸದಸ್ಯರ ಹೆಸರು | : ಶ್ರೀ ಶರವಣ ಟಿ.ಎ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : 18.12.2024 |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಾಸ್ಟರ್ ಪ್ಲಾನ್ ವ್ಯಾಪ್ತಿಯ ಪ್ರದೇಶಗಳಲ್ಲಿ ಭೂ ಪರಿವರ್ತನೆ ಮಾಡುವ ಸಲುವಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆಗೆ ಸೆಕ್ಷನ್ 95ಕ್ಕೆ ತಿದ್ದುಪಡಿ ಯಾವಾಗ ಮಾಡಲಾಯಿತು; ಅಧಿಸೂಚನೆಯನ್ನು ಯಾವಾಗ ಹೊರಡಿಸಲಾಯಿತು; ಈ ಅಧಿಸೂಚನೆಯ ಪ್ರಮುಖ ಅಂಶಗಳಾವುವು; ವಿವರ ನೀಡುವುದು. | ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 95ಕ್ಕೆ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಇವರ ಅಧಿಸೂಚನೆ ಸಂಖ್ಯೆ ಸಂವ್ಯಶಾಇ 22 ಶಾಸನ 2023 ದಿನಾಂಕ:27.07.2023 ರಂದು ತಿದ್ದುಪಡಿ ತರಲಾಗಿದೆ.<br>ಸದರಿ ಅಧಿಸೂಚನೆಯ ಪ್ರಮುಖ ಅಂಶಗಳು ಈ ಕೆಳಗಿನಂತಿದೆ.<br><br>(i) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಉಪಬಂಧಗಳ ಮೇರೆಗೆ ಸಂಬಂಧಪಟ್ಟ ಭೂಮಿಯ ಸಂಬಂಧದಲ್ಲಿ ಯುಕ್ತವಾಗಿ ಪ್ರಕಟಿಸಲಾದ ಮಾಸ್ಟರ್ ಪ್ಲಾನ್‌ನಲ್ಲಿ ನಿರ್ದಿಷ್ಟಪಡಿಸಿದ ಬಳಕೆಗೆ ಅನುಸಾರವಾಗಿ ಅಂಥ ಭೂಮಿಯು ಕಂದಾಯ ನಿರ್ಧರಣೆಯಾಗಿದ್ದು ಅಥವಾ ಕೃಷಿ ಉದ್ದೇಶಕ್ಕಾಗಿ ಹೊಂದಿದ್ದಲ್ಲಿ ಕೃಷಿಯೇತರ ಉದ್ದೇಶಗಳಿಗಾಗಿ ಭೂ ಪರಿವರ್ತನೆಗೆ ಡೆಪ್ಯುಟಿ ಕಮಿಷನರ ಅನುಮತಿಯ ಅಗತ್ಯವಿರುವುದಿಲ್ಲ.<br><br>ಪರಂತು, ಪ್ರಾಧಿಕಾರದಿಂದ ಅಗತ್ಯ ಅನುಮತಿಯನ್ನು ಪಡೆಯುವ ಸಮಯದಲ್ಲಿ ನಗರ ಯೋಜನಾ ಪ್ರಾಧಿಕಾರಕ್ಕೆ ನಿಯಮಿಸಬಹುದಾದಂಥ ಸ್ವಯಂ ಘೋಷಣೆಯೊಂದಿಗೆ ಉಪಪ್ರಕರಣ (7)ರ ಅಡಿಯಲ್ಲಿ ನಿಯಮಿಸಲಾದ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.<br><br>(ii) ಕಂದಾಯ ನಿರ್ಧರಣೆಯಾಗಿರುವ ಅಥವಾ ಕೃಷಿ ಉದ್ದೇಶಕ್ಕಾಗಿ ಹೊಂದಿರುವ ಭೂಮಿಯ ಯಾರೇ ಅಧಿಭೋಗದಾರನು ಮಾಸ್ಟರ್ ಪ್ಲಾನ್ ಪ್ರಕಟಿಸದಿರುವಂಥಹ ಸ್ಥಳೀಯ ಯೋಜನಾ ಪ್ರದೇಶದ ಹೊರಗಿರುವ ಅಂಥ ಭೂಮಿಯನ್ನು |

| | | |
|---|---|---|
| | | ಅಥವಾ ಅದರ ಭಾಗವನ್ನು ಯಾವುದೇ ಇತರ ಉದ್ದೇಶಕ್ಕಾಗಿ ಪರಿವರ್ತಿಸಲು ಬಯಸಿದಲ್ಲಿ, ಅರ್ಜಿದಾರನು ನಿಯಮಿಸಬಹುದಾದಂಥ ರೀತಿಯಲ್ಲಿ ಡೆಪ್ಯುಟಿ ಕಮಿಷನರ್‌ಗೆ ಅಫಿಡಾವಿಟ್‌ನೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.<br><br>ಸಂಬಂಧಪಟ್ಟ ಪ್ರಾಧಿಕಾರಗಳು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ತಮ್ಮ ಅಭಿಪ್ರಾಯವನ್ನು ಒದಗಿಸತಕ್ಕದ್ದು. ಡೆಪ್ಯುಟಿ ಕಮಿಷನರನು ಸಂಬಂಧಪಟ್ಟ ಪ್ರಾಧಿಕಾರಗಳು ಒದಗಿಸಿದ ಅಭಿಪ್ರಾಯಗಳಿಗೊಳಪಟ್ಟು ಮತ್ತು ಉಪಪ್ರಕರಣ (7)ರಡಿಯಲ್ಲಿ ನಿಯಮಿಸಲಾದ ಶುಲ್ಕ ಪಾವತಿಗೊಳಪಟ್ಟು ಅರ್ಜಿಯನುಸಾರವಾಗಿ ಭೂ ಪರಿವರ್ತನೆಗೆ ಅನುಮೋದನೆಯನ್ನು ನೀಡತಕ್ಕದ್ದು:<br><br>ಪರಂತು, ಪ್ರಾಧಿಕಾರಗಳು ಸದರಿ ಹದಿನೈದು ದಿನಗಳೊಳಗೆ ಯಾವುದೇ ಅಭಿಪ್ರಾಯ ಸಲ್ಲಿಸದಿರುವ ಸಂದರ್ಭದಲ್ಲಿ ಅರ್ಜಿಗನುಸಾರ ಸದರಿ ಭೂ ಬಳಕೆ ಬದಲಾವಣೆಗೆ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಭಾವಿಸತಕ್ಕದ್ದು:<br><br>ಮತ್ತು ಪರಂತು, ಡೆಪ್ಯುಟಿ ಕಮಿಷನರನು ಅರ್ಜಿಯ ಸ್ವೀಕೃತಿಯ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಬಗ್ಗೆ ತನ್ನ ತೀರ್ಮಾನವನ್ನು ನೀಡಲು ಮತ್ತು ಈ ಉಪಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸಲು ವಿಫಲನಾದ ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರನು ಭೂ ಬಳಕೆ ಬದಲಾವಣೆಗಾಗಿ ಅನುಮೋದನೆಯನ್ನು ನೀಡಿದ್ದಾರೆಂದು ಭಾವಿಸತಕ್ಕದ್ದು ಮತ್ತು ಉಪಪ್ರಕರಣ (7)ರ ಅಡಿಯಲ್ಲಿ ನಿಯಮಿಸಲಾದ ಶುಲ್ಕದ ಸಂದಾಯಕ್ಕೆ ಒಳಪಟ್ಟು ನಿಯಮಿಸಬಹುದಾದಂಥ ರೀತಿಯಲ್ಲಿ ಅದನ್ನು ಪ್ರಮಾಣೀಕರಿಸತಕ್ಕದ್ದು ಮತ್ತು ಹೊರಡಿಸತಕ್ಕದ್ದು. |
| ಆ) | ಸದರಿ ಅಧಿಸೂಚನೆಗೆ ಜಾರಿಗೊಳಿಸಲು ನಿಯಮಗಳನ್ನು ರೂಪಿಸಲಾಗಿದೆಯೇ; ರೂಪಿಸದಿದ್ದಲ್ಲಿ, ಕಾರಣಗಳೇನು; (ಸಂಪೂರ್ಣ ವಿವರ ನೀಡುವುದು) | ಸದರಿ ಅಧಿಸೂಚನೆಗೆ ಜಾರಿಗೊಳಿಸಲು ನಿಯಮಗಳನ್ನು ರೂಪಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಇ) | ಈ ಅಧಿಸೂಚನೆಯ ನಿಯಮಗಳನ್ನು ರೂಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಯಾವ ಕಾಲಮಿತಿಯಲ್ಲಿ ನಿಯಮ ರೂಪಿಸಿ ಕಾಯ್ದೆಯನ್ನು ಜಾರಿಗೊಳಿಸಲಾಗುವುದು; (ಸಂಪೂರ್ಣ ಮಾಹಿತಿ ನೀಡುವುದು) | |
| ಈ) | ಕಾಯ್ದೆಗೆ ತಿದ್ದುಪಡಿಯಾಗಿ ಅಧಿಸೂಚನೆ ನಂತರವು ಅಕ್ರಮವಾಗಿ ಭೂ ಪರಿವರ್ತನೆ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಸದರಿ ತಿದ್ದುಪಡಿಯು ರಾಜ್ಯ ಸರ್ಕಾರವು ಅಧಿಸೂಚನೆ ಹೊರಡಿಸಿದ ನಂತರ ಜಾರಿಗೆ ಬರುತ್ತದೆ. ಆದ್ದರಿಂದ ಸದರಿ ತಿದ್ದುಪಡಿಯು ಜಾರಿಯಲ್ಲಿರುವುದಿಲ್ಲ. |

ಸಂಖ್ಯೆ: ಆರ್‌ಡಿ 139 ಎಲ್‌ಜಿಕ್ಯೂ 2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು